# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 30-03-2021 ಪ್ರಶ್ನೆ ಸಂಖ್ಯೆ : 2086(2436)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 30-03-2021

ಉತ್ತರಿಸುವ ಸಚಿವರು: ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು

ವಿಷಯ : ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ನೀಡಬೇಕಾಗಿರುವ ಬಾಕಿ ಮೊಬಲಗು ಕುರಿತು

(ಅ) ರಾಜ್ಯದಲ್ಲಿ ಸಹಕಾರ ಮತ್ತು ಖಾಸಗಿ ವಲಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಪ್ರತಿ ವರ್ಷ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಳೆದ 3 ವರ್ಷಗಳ ವಿವರ ನೀಡುವುದು;

(ಆ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಸಕ್ಕರೆ ನೀತಿಯನ್ನು ಬದಲಾಯಿಸಲು ಈ ಸಕ್ಕರೆ ಕಾರ್ಖಾನೆಗಳು ಒತ್ತಾಯಿಸಿವೆಯೇ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ದಿನಾಂಕ : 31-12-2020ರ ಅಂತ್ಯಕ್ಕೆ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ನೀಡಬೇಕಾಗಿರುವ ಕಬ್ಬು ಸರಬರಾಜಿನ ಬಾಕಿ ಮೊಬಲಗು ಎಷ್ಟು; ಈ ಬಾಕಿಯನ್ನು ತಿರುವಳಿ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಿರುವ ಆರ್ಥಿಕ ನೆರವು ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಕೇಂದ್ರ ಸರ್ಕಾರದ 2020-21 ನೇ ಆರ್ಥಿಕ ನೀತಿಯಲ್ಲಿ ಸಕ್ಕರೆ ವಲಯಕ್ಕೆ ಘೋಷಿತವಾಗಿರುವ ರೂ.35,000 ಕೋಟಿಗಳಲ್ಲಿ ರಾಜ್ಯ ಸರ್ಕಾರ ಪಡೆದ ಆರ್ಥಿಕ ನೆರವೆಷ್ಟು? (ವಿವರ ನೀಡುವುದು)